ಉಪಾಧ್ಯಕ್ಷರು: ಈಗ ಶೂನ್ಯ ವೇಳೆಯಲ್ಲಿ 4-6 ಪ್ರಮುಖ ವಿಚಾರಗಳಿವೆ. ಅವು ಮುಗಿದ ಕೂಡಲೇ ತಾವು ಪ್ರಸ್ತಾಪ ಮಾಡಿ.

(4) ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಿದ ವಿಷಯಗಳು.

(ಅ) ಶಿಗ್ಗಾಂವ ತಾಲ್ಲೂಕು ನಾಗನೂರು ಕೆರೆ ಕೋಡಿ ಒಡೆದುದರಿಂದ ತೊಂದರೆ:

ಶ್ರೀ ಮಂಜುನಾಥ್ ಸಿ.ಕುನ್ನೂರ್: (ಶಿಗ್ಗಾಂವ್): ಮಾನ್ಯ ಉಪಾಧ್ಯಕ್ಷರೆ, ಶಿಗ್ಗಾಂವ್ ತಾಲ್ಲೂಕು ನಾಗನೂರು ಕೆರೆಯ ಕೋಡಿ ಸುಮಾರು 8 ದಿನಗಳ ಹಿಂದೆ ಒಡೆದು ಅಲ್ಲಿ ಸಾಕಷ್ಟು ರೈತರ ಜಮೀನಿನ ಮೇಲೆ ನೀರು ಹೋಗಿದೆ ಮತ್ತು ಕೆರೆಯಲ್ಲಿದ್ದ ನೀರು ಸಂಪೂರ್ಣವಾಗಿ ಹರಿದು ಬೇರೆ ಕಡೆಗೆ ಹೋಗುತ್ತಿದೆ. ಈ ಬಗ್ಗೆ ನಾನು ಮುಖ್ಯ ಇಂಜಿನಿಯರ್ ಅವರ ಗಮನಕ್ಕೆ ಕೂಡ ತಂದಿದ್ದೆ. ಅವರು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರಿಗೆ ಹೇಳಿದ್ದಾರೆ. ಅವರು ರಾಣಿಬೆನ್ನೂರಿನ ಕೆ.ಯು.ಡಬ್ಲು.ಎಸ್.ನಲ್ಲಿರುತ್ತಾರೆ. ಅವರು ಮುನಿಸಿಪಾಲಿಟಿಗೆ ಹೋಗಿ ಹೀಗಾಗಿದೆ ಅಂದಾಗ ಊರಿನ ಜನರನ್ನು ಕರೆದುಕೊಂಡು ರೈತರು ತಮ್ಮ ಟ್ರಾಕ್ಟರ್ ತೆಗೆದುಕೊಂಡು ಮಣ್ಣನ್ನು ಹಾಕಿ, ಉಸಿಕಿನ ಚೀಲ ಹಾಕಿ ಕೆರೆ ಕೋಡಿ ಏನು ಒಡೆದಿತ್ತು ಅದನ್ನು ಸಂಪೂರ್ಣವಾಗಿ ಬಂದ್ ಮಾಡಿದ್ದಾರೆ. ಅಲ್ಲಿ ತಾತ್ಪೂರ್ತಿಕವಾಗಿ ಕೆಲಸ ಮಾಡಿದ್ದಾರೆ. ಈಗಾಗಲೇ ತಾವು ಈ ಕೆರೆಯನ್ನು ಆಳ ಮಾಡುವುದಕ್ಕೆ ಕುಡಿಯುವ ನೀರಿನ ಯೋಜನೆಯಲ್ಲಿ 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಆ ಕೋಡಿ ಕೆಲಸ ಆಗಿದೆ ಅಂದಮೇಲೆ ಅದಕ್ಕೆ ಹಣ ಪಾವತಿ ಆಗಿರಬೇಕು. ಅದು ಸರಿಯಾಗಿ ಆಗಿದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಒಂದು ಕೋಡಿ ಒಡೆದರೆ ಅಲ್ಲಿರತಕ್ಕ 7 ಹಳ್ಳಿಗಳು ಮುಳುಗತಕ್ಕ ಪರಿಸ್ಥಿತಿ ಇದೆ. ಆ ಕಾರಣ ಮುನ್ನೆಚ್ಚರಿಕೆಯಿಂದ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಂಪೂರ್ಣವಾಗಿ ಶಾಶ್ವತವಾಗಿ ಅತೀ ಶೀಘ್ರದಲ್ಲಿ ಆ ಕೆಲಸವನ್ನು ಇವತ್ತು-ನಾಳೆ ಮಾಡುವುದಕ್ಕೆ ಯಾವ ಏಜೆನ್ಸಿಗೆ ಕೊಟ್ಟಿದ್ದೀರಿ? ಕೆ.ಎಸ್.ಸಿ.ಸಿ.ಗೆ ಕೊಟ್ಟಿದ್ದೀರೋ ಅಥವಾ ತಮ್ಮ ಇಲಾಖೆಯ ವತಿಯಿಂದ ಮಾಡುತ್ತೀರೊ, ಅವರ ಕಡೆಯಿಂದ ಕೂಡಲೇ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಣ ಸಂದಾಯ ಮಾಡಿ 3 ವರ್ಷವಾದರೂ ಇನ್ನೂ ಕೆಲಸ ಆಗಿಲ್ಲ. ಅಲ್ಲಿನ ಜನರಿಗೆ ಪರಿಹಾರ ಕೊಡಬೇಕೆಂದು ಕಂದಾಯ ಇಲಾಖೆಯಿಂದ ಮೂವ್ ಮಾಡಿದ್ದರೂ ಇನ್ನೂ ಪರಿಹಾರ ಹಣವನ್ನು ಕೊಟ್ಟಿಲ್ಲ. ಅದನ್ನು ಕೂಡಲೇ ಕೊಡಿಸಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: (ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಈಗತಾನೇ ಶೂನ್ಯವೇಳೆಯಲ್ಲಿ ಶಿಗ್ಗಾಂವ್ ತಾಲ್ಲೂಕಿನ ಸವಣೂರು, ಬಂಕಾಪುರ ಸಂಯುಕ್ತ ಯೋಜನೆಗೆ ಮಾಡಿರತಕ್ಕ ನಾಗನೂರು ಕೆರೆಯ ವಿಚಾರವನ್ನು

ಪ್ರಸ್ತಾಪ ಮಾಡಿದರು. ಅಲ್ಲಿ ರಿಸರ್ವಾಯರ್ ಮಾಡಿಕೊಂಡು ಅಲ್ಲಿಂದ ನೀರು ಸರಬರಾಜು ಮಾಡತಕ್ಕದ್ದಕ್ಕೆ

1.20 ಪಿಎಂ

ಸುಮಾರು 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕೋಡಿ ಸರಿಯಾಗಿಲ್ಲದೆ ನೀರು ಹೋಗುತ್ತದೆ. ಕೋಡಿ ಬಿದ್ದುಹೋಗಿದೆ ಎಂದು ಹೇಳಿ, ವೇಸ್ಟ್‌ವೇರ್ ಸರಿ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಈಗಾಗಲೇ ಮರಳು ಚೀಲಗಳನ್ನು ಹಾಕಿ ರೈತರು ತಡೆಹಿಡಿದಿದ್ದಾರೆಂದು ಅವರು ಹೇಳಿದ್ದು, ಅದರ ಬಗ್ಗೆ ಆಗಲೇ ಅವರು ಒಂದು ಪತ್ರವನ್ನು ಕೊಟ್ಟಿದ್ದಾರೆ. ಅವರು ಪತ್ರ ಕೊಟ್ಟಾದ ಮೇಲೆ ನಾನು ಮುಖ್ಯ ಇಂಜಿನಿಯರ್‌ರವರೊಡನೆ ಮಾತನಾಡಿದ್ದೇವೆ ಕೂಡಲೇ ಕ್ರಮ ತೆಗೆದುಕೊಂಡು ನೀರನ್ನು ನಿಲ್ಲಿಸುವಂತಹ ವ್ಯವಸ್ಥೆಯಾಗಬೇಕಾಗಿದೆ; ವೇಸ್ಟ್ ವೇರ್‌ರಿಪೇರಿ ಏನಿದೆ ಅದನ್ನು ಮಾಡಬೇಕೆಂದು ಹೇಳಿದ್ದೇನೆ. ಹಾಗೆಯೇ, ಕೆಸಿಸಿಯವರಾಗಲೀ ಅಥವಾ ನಮ್ಮ ಇಲಾಖೆಯವರಾಗಲೀ ಕಳಪೆ ಕೆಲಸ ಮಾಡಿದ್ದರೆ, ಯಾರು ಕಳಪೆ ಕೆಲಸ ಮಾಡಿದ್ದಾರೋ, ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳ ಬೇಕು ಮತ್ತು ಕಂಟ್ರಾಕ್ಟರ್ ಏನಾದರೂ ಮಾಡಿದ್ದರೆ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಮಾನ್ಯ ಸದಸ್ಯರು ತಿಳಿಸಿದ ಕೂಡಲೇ, ಇವತ್ತು ವೇಸ್ಟ್‌ವೇರ್ ರಿಪೇರಿಯಾದ್ದರಿಂದ, ಕೂಡಲೇ ಅದರ ಕೆಲಸ ತೆಗೆದುಕೊಳ್ಳಬೇಕೆಂದು ಅಲ್ಲಿನ ಅಧಿಕಾರಿಗೆ ಆದೇಶವನ್ನೂ ಸಹ ಕೊಟ್ಟಿದ್ದೇವೆ. ಮತ್ತೆ, ಅಲ್ಲಿ ಏನೇನು ಕೆಲಸ-ಕಾರ್ಯಗಳಾಗಿದೆ ಎನ್ನುವುದರ ಬಗ್ಗೆ ಮತ್ತು ಅಲ್ಲಿಗೆ ಯಾವ ಇಂಜಿನಿಯರ್‌ರೂ ಹೋಗಿಲ್ಲವೆನ್ನುವುದರ ಬಗ್ಗೆ ತಿಳಿದು ಮಾನ್ಯ ಸದಸ್ಯರಿಗೆ ನಾಳೆ ಸಂಪೂರ್ಣ ವಿಷಯವನ್ನು ನಾನೇ ತಮ್ಮ ಹತ್ತಿರ ಮಾತನಾಡಿ ತಿಳಿಸುತ್ತೇನೆ. ಅಲ್ಲಿ ಏನೇನಾಗಿದೆ ಎಂದು ಹೇಳಿ, ಏನು ರಕ್ಷಣೆ ಕೊಡಬೇಕೋ, ಆ ರಕ್ಷಣೆಯನ್ನು ಕೊಡುವಂತಹ ಕಾರ್ಯವನ್ನು ನಾನು ಮಾಡುತ್ತೇನೆ. ಪರಿಹಾರದ ಬಗ್ಗೆ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಆ ಪರಿಹಾರದ ಹಣವನ್ನು ನಾವು ಅವರಿಗೆ ತುಂಬಿದ್ದೇವೆ. ಏಕೋ, ಏನೋ ತಡಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ....

ಶ್ರೀ ಮಂಜುನಾಥ ಸಿ. ಕುನ್ನೂರ್: 3 ವರ್ಷಗಳಾಯಿತು. ತಾವು ಹಣವನ್ನು ತುಂಬಿದಿರಿ. ಜಿಲ್ಲಾಧಿಕಾರಿಗಳು ಹಣವನ್ನು ಕೊಡುತ್ತಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು, ಅದು ಏನಾದರೂ ಕಾನೂನಿನ ತೊಡಕಾಗಿರಬಹುದೇ ಎಂಬುದನ್ನು ತಿಳಿದು ಅವರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.